

ಶಿಲ್ಪಿ ಜಗನ್ನಾಥ ಆಚಾರ್ಯ



# ಶಿವಾರಪಟ್ಟಣ ಶಿಲ್ಪಕಲೆಗೆ ನೂರಾರು ವಿಘ್ನ

■ ನಿರಂಜನ ವಾನಳ್ಳಿ

ಬೆಂಗಳೂರು ತಿರುಪತಿ ಹೆದ್ದಾರಿಯಲ್ಲಿ ನರಸಾಪುರವೆಂಬ ಕೈಗಾರಿಕಾ ಪ್ರದೇಶ ಸಿಗುತ್ತದೆ. ನರಸಾಪುರದಿಂದ ಮುಂದೆ ಹೋದರೆ ಅನತಿ ದೂರದಲ್ಲಿ ರಸ್ತೆಗಳ ಎರಡೂ ಬದಿಗೆ ಬಿದ್ದಿರುವ ನೂರಾರು ಶಿಲ್ಪಗಳು ಗಮನಸೆಳೆಯುತ್ತವೆ. ಅದೇ ಶಿವಾರಪಟ್ಟಣ.

ಕಲ್ಲು ಕೆತ್ತನೆಗಾಗಿ ಪ್ರಪಂಚದಲ್ಲೇ ಹೆಸರುವಾಸಿಯಾದ ಹಳ್ಳಿ ಶಿವಾರಪಟ್ಟಣ. ಹೆಸರು ಮಾತ್ರ ಪಟ್ಟಣ! ಈ ಊರಲ್ಲಿ ನಾನೂರಕ್ಕೂ ಹೆಚ್ಚು ಮನೆಗಳಿವೆ. ಅವುಗಳಲ್ಲಿ ಸುಮಾರು ನೂರಿಪ್ಪತ್ತು ಮನೆಗಳಿಗೆ ಕಲ್ಲು ಕೆತ್ತನೆಯೇ ಉದ್ಯೋಗ. ಅವರೆಲ್ಲ ಬಹುತೇಕ ವಿಶ್ವಕರ್ಮ ಜನಾಂಗದವರು. ಅವರ ಅಜ್ಜ ಮುತ್ತಜ್ಜರ ಕಾಲದಿಂದಲೂ ಇಲ್ಲಿ ಶಿಲ್ಪಕೆತ್ತನೆಯನ್ನು ಪರಂಪರೆಯಾಗಿಸಿಕೊಂಡವರು.

ಈಗಿನವರ ಪೂರ್ವಿಕರು ಎಲ್ಲಿಂದ ಬಂದರೋ ಗೊತ್ತಿಲ್ಲ. ಶಿಲ್ಪ ಕೆತ್ತನೆಗೆ ಬೇಕಾದ ಕಲ್ಲುಗಳೂ ಇಲ್ಲಿ ದೊರೆಯುವುದಿಲ್ಲ. ಅವೆಲ್ಲ ಬರಬೇಕಾದುದು ಚಾಮರಾಜನಗರದ ಕಲ್ಲುಗಣಿಗಳಿಂದ ಅಥವಾ ಚಿತ್ರದುರ್ಗದ ಗುಡ್ಡಬೆಟ್ಟಗಳಿಂದ. ಚಾಮರಾಜನಗರದಲ್ಲಿ ಸಿಗುವ ಬಂಡೆಗಳು ಬಳಪದ ಕಲ್ಲುಗಳು. ಚಿತ್ರದುರ್ಗದಲ್ಲಿ ಸಿಗುವುದು ಕೃಷ್ಣಶಿಲೆ. ಬಳಪದ ಕಲ್ಲು ಕಡೆಯಲು ಬೆಣ್ಣೆಯ ಹಾಗೆ. ಶಿಲ್ಪಿ ತನ್ನ ಕುಸುರಿ ವಿದ್ಯೆಯನ್ನೆಲ್ಲಾ ಇಲ್ಲಿ ತೋರಿಸಬಹುದು. ಆದರೆ ಕೃಷ್ಣ ಶಿಲೆ ಮಾತ್ರ ಬಹಳ ಗಟ್ಟಿ. ಕುಟ್ಟಿದರೆ ಕಬ್ಬಿಣದಂತೆ ಸದ್ದು ಬರುತ್ತದೆ. ಅದರಿಂದ ಬರುವ ಸದ್ದೇ ಇದರ ಗಟ್ಟಿತನ ಹೇಳಬಲ್ಲದು. ಇಲ್ಲಿನ ನೂರಾರು ವಿಶ್ವಕರ್ಮರ ಮನೆಗಳಲ್ಲೂ ತಲೆಮಾರುಗಳಿಂದ ಈ ಕಲ್ಲುಗಳಿಗೆ ಜೀವ ತುಂಬುವ ಕೆಲಸ ನಡೆಯುತ್ತಿದೆ.

ಇವರು ಚಾಮರಾಜನಗರ ಅಥವಾ ಚಿತ್ರದುರ್ಗಗಳಲ್ಲಿ ಬಂಡೆಗಳನ್ನು ಗುತ್ತಿಗೆ ಪಡೆಯುತ್ತಾರೆ. ಈಗಿನ ಕಾಲದಲ್ಲಿ ಒಂದು ಟನ್ನಿಗೆ 15 ಸಾವಿರ! ಅದನ್ನು ಶಿವಾರಪಟ್ಟಣಕ್ಕೆ ಲಾರಿಯಲ್ಲಿ ಸಾಗಿಸುವಾಗ ಖರ್ಚು 20 ಸಾವಿರ ದಾಟುವುದೂ ಇದೆ. ಇದನ್ನೇ ಶಿಲ್ಪಿಗಳು ನೋವಿನಿಂದ ಹೇಳುವುದು. ಮರದ ಕೆತ್ತನೆ ಮಾಡುವವರಿಗೆ ಸರ್ಕಾರಿ ಡಿಪೋಗಳಿಂದ ಮರವನ್ನು ಕೊಡುವ ಪದ್ಧತಿಯಿದೆ. ಆದರೆ ಪಂಚಲೋಹದಲ್ಲಿ ಎರಕ ಹೊಯ್ಯುವ ಅಥವಾ ಕಲ್ಲುಗಳಲ್ಲಿ ಕೆತ್ತನೆ ಮಾಡುವವರಿಗೆ ಈ ಸೌಲಭ್ಯ ಯಾಕಿಲ್ಲ? ಹಲವಾರು ಸರ್ಕಾರಗಳಿಗೆ, ಎಂಎಲ್‌ಎಗಳಿಗೆ ಮನವಿ ಅರ್ಪಿಸಿದರೂ ಇವರ ಹಕ್ಕೊತ್ತಾಯ ಫಲ ಕಂಡಿಲ್ಲ. ಈ ಊರಲ್ಲಿ ಎಲ್ಲಿಯೂ ಕಡೆಯುವ ಕಲ್ಲು ಸಿಗುವುದಿಲ್ಲ. ಬೇರೆ ಊರಿಂದ ತರಿಸಿಕೊಂಡ ಬಂಡೆ ಕೂಡ ಕಡೆಯಲು ಬಂದೇ ಬಿಡುತ್ತದೆಯೆಂದು ಖಂಡಿತವಾಗಿ ಹೇಳಲಾಗದು. ಯಾಕೆಂದರೆ ಕಡೆಯುತ್ತಾ ಹೋದಹಾಗೆ ಕೆಲವು ಬಂಡೆಗಳಲ್ಲಿ 'ಗರ್ಭವಿರುವುದು' ಪ್ರಕಟಗೊಳ್ಳುತ್ತದೆ. (ಅಂದರೆ ಪೊಳ್ಳುಜಾಗ ಇರುವುದು ಗೊತ್ತಾಗುತ್ತದೆ) ಅಂಥ ಕಲ್ಲು ಕಡೆಯಲುಬಾರದು. ಆಗ ಅಲ್ಲಿಯವರೆಗಿನ ಶ್ರಮ, ಹಣ ಎಲ್ಲವೂ ವ್ಯರ್ಥ.

ಅವರನ್ನು ತುರ್ತಾಗಿ ಕಾಡುತ್ತಿರುವ ಇನ್ನೊಂದು ಸಮಸ್ಯೆಯಿದೆ. ಇಲ್ಲಿಯವರೆಗೂ ಶಿವಾರಪಟ್ಟಣದ ಶಿಲ್ಪಿಗಳು ಊರ ಹೊರಗೆ ಶೆಡ್ಡು ಹಾಕಿಕೊಂಡು ಕೆತ್ತನೆ ಕೆಲಸ ಮಾಡುತ್ತಿದ್ದರು. ಊರ ಒಳಗೆ, ಮನೆಗಳಲ್ಲಿ ಮಾಡಲು ಹೋದರೆ ದೂಳು ಬರುತ್ತೆಂದು ಮನೆಗಳವರು ದೂರುತ್ತಾರೆ. ಹೀಗಾಗಿ ಊರ ಹೊರಗಿನ ಶೆಡ್ಡುಗಳಲ್ಲಿ ಕೆಲಸ ನಡೆಯುತ್ತಿತ್ತು. ಆದರೆ ಇತ್ತೀಚೆಗೆ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯವರು ಪಟ್ಟಣದ ಹೊರವಲಯದ ಜಾಗಗಳನ್ನೆಲ್ಲ ಕೈಗಾರಿಕೆಗಾಗಿ ವಶಪಡಿಸಿಕೊಳ್ಳುತ್ತಿದ್ದಾರೆ. ಇವರಿಗೆ ಕೆತ್ತನೆ ಕೆಲಸ ಮಾಡಲು ತುಂಡುಭೂಮಿಯೂ ಉಳಿದಿಲ್ಲ. ಮಾತ್ರವಲ್ಲ ಇರುವ ಶೆಡ್ಡುಗಳನ್ನು ಎತ್ತಂಗಡಿ ಮಾಡುತ್ತಿದ್ದಾರೆ. ಅಂದರೆ ಶತಮಾನಗಳಿಂದ ಕಲ್ಲು ಕೆತ್ತನೆ ನಡೆಯುತ್ತಿದ್ದ ಊರಿನಲ್ಲಿ ಇನ್ನು ಅದಕ್ಕೆ ಸ್ಥಳವಿಲ್ಲವೆಂತಾಯಿತು. ಅಂದರೆ ಅವರು ಹೋಗುವುದಾದರೂ ಎಲ್ಲಿಗೆ? ವಿಶೇಷವೆಂದರೆ ಈ ಊರಲ್ಲಿ ಹೊಸ ತಲೆಮಾರಿನ ಹುಡುಗರೂ ಕಲ್ಲು ಕೆತ್ತನೆಯಿಂದ ವಿಮುಖರಾಗಿಲ್ಲ. ಅವರು ಕಷ್ಟವೋ ಸುಖವೋ ಇದರಲ್ಲಿ ಬದುಕು ರೂಪಿಸಿಕೊಳ್ಳಲು ಸಿದ್ಧರಿದ್ದಾರೆ. ಆದರೆ ವಾತಾವರಣ ಹಾಗೂ ಸಮಾಜ ಅವರ ಕಲೆಯನ್ನು ಬಳಸಿಕೊಳ್ಳಲು ಮುಂದೆ ಬರುತ್ತಿಲ್ಲ ಎಂಬುದೇ ಅವರ ನೋವು.

ಶಿಲ್ಪಿ ಜಗನ್ನಾಥ ಆಚಾರ್ಯ ಅವರು ಈ ಶಿಲ್ಪಿಗಳ ಮುಖಂಡರು. ಗ್ರಾಮಪಂಚಾಯಿತಿಯಲ್ಲಿ ಈ ಶಿಲ್ಪಿಗಳನ್ನು ಪ್ರತಿನಿಧಿಸುತ್ತಾ ಬಂದವರು. ಆದರೆ ಇವರ ಕೂಗಿಗೆ ಬೆಲೆಯಿಲ್ಲದಂತೆ ಆಗುತ್ತದೆ ಎಂಬ ನೋವು ಅವರಿಗೆ. ಮೂಲತಃ ಅವರಿಗೆ ಸರ್ಕಾರವು ಕಲ್ಲುಗಳನ್ನು ಒದಗಿಸಬೇಕು. ಅನಾದಿ ಕಾಲದಿಂದ ಕಲ್ಲು ಕೊರೆಯುತ್ತ ಬಂದ ಜಾಗಗಳಲ್ಲಿ ಈ ಕೆತ್ತನೆ ಮುಂದುವರೆಸಲು ಅವಕಾಶ ಮಾಡಿಕೊಡಬೇಕು ಎಂಬುದು ಅವರ ಒತ್ತಾಯ. ಆದರೆ ಸರ್ಕಾರಗಳ ಮೇಲೆ ಸರ್ಕಾರ ಬಂದರೂ ಅವರ ಕೂಗು ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಆಗುತ್ತಿದೆ ಎಂಬುದು ಶಿವಾರಪಟ್ಟಣದ ಶಿಲ್ಪಿಗಳ ನೋವು. ■